







ನೀಡುತ್ತದೆ. ಕ್ರೋಶದಿಂದ ಮಾಡುವಾಗ ಸೀರೆಗೆ ಹೊಂದುವಂತಹ ಅದೇ ಬಣ್ಣದ ಸಿಲ್ಕ್ ಥ್ರೆಡ್ ಮತ್ತು ಕುಚ್ಚನ್ನು ಕಟ್ಟಲು ಜರಿ ಥ್ರೆಡ್‌ಗಳನ್ನು ಬಳಸುತ್ತಾರೆ. ಇದರಲ್ಲಿ ಸೀರೆಯ ದಾರವನ್ನು ತೆಗೆಯುವುದಿಲ್ಲ. ಆಗ ಸೀರೆಯ ತುದಿಭಾಗ ವೇಸ್ಟ್ ಆಗುವುದಿಲ್ಲ. ಇನ್ನೊಂದು ಉಪಯೋಗವೆಂದರೆ ಒಂದು ವೇಳೆ 1–2 ವರ್ಷ ಕಳೆದ ಮೇಲೆ ಬೇಡ ಎನ್ನಿಸಿದರೆ ಸುಲಭವಾಗಿ ತೆಗೆಯಬಹುದು. ಸೀರೆಗೆ ಏನೂ ಹಾನಿಯಾಗುವುದಿಲ್ಲ.

## ತರಾವರಿ ಬೀಡ್ಸ್ ಕುಚ್ಚು

ಇತ್ತೀಚೆಗೆ ಇನ್ನೂ ಹೆಚ್ಚು ಪ್ರಚಲಿತವಾಗುತ್ತಿರುವುದು ವಿವಿಧ ರೀತಿಯ ಮಣಿಗಳನ್ನು ಬಳಸಿ ಮಾಡುವಂತಹ ರಿಂಗ್ ಬೀಡ್ಸ್, ರೌಂಡ್ ಬೀಡ್ಸ್ ಡೋನಟ್ ಬೀಡ್ಸ್, ದೊಡ್ಡ ಬೀಡ್ಸ್, ಸ್ಕೇರ್ ಬೀಡ್ಸ್, ಡೈಮಂಡ್ ಆಕಾರದ ಬೀಡ್ಸ್, ಇತ್ಯಾದಿ ಪ್ರಕಾರಗಳಿವೆ. ಅದರಲ್ಲೂ ವಿವಿಧ ರೀತಿಯ ಹೂವಿನ ಆಕಾರದ ಹಾಗೂ ಎಲೆಯ ಆಕಾರದ ಮನಿಗಳು ಬಂದಿವೆ. ಸೀರೆಯಲ್ಲಿರುವ ಡಿಸೈನ್‌ಗಳನ್ನೇ ಇಲ್ಲಿ ಬಳಸಬಹುದು. ಆದರೆ ಮಣಿಗಳ ಗುಣಮಟ್ಟ ಚೆನ್ನಾಗಿರಬೇಕು. ಇಲ್ಲದಿದ್ದರೆ ಎರಡ್ಮೂರು ವರ್ಷಕ್ಕೆಲ್ಲಾ ಬಣ್ಣ ಕಳೆದುಕೊಳ್ಳುತ್ತದೆ. ಈ ರೀತಿಯ ಬೀಡ್ಸ್ ಗಳನ್ನು ಬಳಸಿ ಮಾಡುವ ಗ್ರಾಂಡ್ ಕುಚ್ಚುಗಳು ರೇಷ್ಮೆ ಸೀರೆಗೆ ಹೆಚ್ಚು ಸೂಕ್ತ. ತುಂಬಾ ಆಕರ್ಷಕವಾಗಿ ಕಾಣುತ್ತದೆ. ಮದುಮಗಳ ಸೀರೆಗೆ ಮಾಡುವ ಕುಚ್ಚಿನ ವಿನ್ಯಾಸಗಳು (ಬ್ರೈಡಲ್ ಸಾರಿ ಟಸ್ಸೆಲ್ಸ್) ತುಂಬಾ ಪ್ರಸಿದ್ಧಿಯಾಗಿವೆ. ಅದರಲ್ಲೂ ಆರ್ಚ್ ವಿತ್ ಸ್ಮಾಲ್ ಬೀಡ್ಸ್ ವಿನ್ಯಾಸ ಹೆಚ್ಚು ಹೊಂದುತ್ತದೆ. ಇತ್ತೀಚೆಗೆ ಫ್ಯಾನ್ಸಿ ಹಾಗೂ ಇತರ ಸೀರೆಗಳಿಗೆ ಅದರಲ್ಲೇ ಕುಚ್ಚು ಬರುತ್ತದೆ. ಜೊತೆಗೆ ರೆಡಿಮೇಡ್ ಕುಚ್ಚುಗಳು ಬೇಕಾದ ಬಣ್ಣಗಳಲ್ಲಿ ಲಭ್ಯ. ಅದನ್ನು ಕೊಂಡು ನಮ್ಮ ಸೀರೆಗೆ ಜೋಡಿಸಿಕೊಳ್ಳಬಹುದು.

ಸೀರೆಗೆ ಕುಚ್ಚು ಕಟ್ಟುವುದು ನಾಜೂಕಿನ ಕೆಲಸ. ನೋಡುವುದಕ್ಕೆ ಬಹಳ ಸರಳ ಎನಿಸುವ ಇದನ್ನು ಹಾಕಲು ಮಾತ್ರ ಸಾಕಷ್ಟು ಸಮಯ ಬೇಕು.ಇದು ಕೈಯಲ್ಲೇ ಮಾಡುವ ಕೆಲಸ. ತಾಳ್ಮೆಯೂ ಬೇಕು. ಇದು ನೀಟಾಗಿ ಬಂದರೆ ಮಾತ್ರ ಚೆನ್ನಾಗಿ ಕಾಣಿಸುತ್ತದೆ. ಅದರಲ್ಲೂ ಕ್ರೋಶದಿಂದ ಹಾಕುವಾಗ ತಾಳ್ಮೆ ಬೇಕು. ದಾರ ಎದ್ದುಹೋಗದ ಹಾಗೆ ನೋಡಿಕೊಳ್ಳಬೇಕು. ಮಧ್ಯೆ ಎಲ್ಲೂ ಗಂಟುಗಳು ಬರಬಾರದು. ಕುಚ್ಚಿಗೆ ಗಂಟು ಹಾಕುವಾಗ ಜಾಗ್ರತೆ ಬೇಕು, ಇಲ್ಲದಿದ್ದರೆ ಸ್ವಲ್ಪ ಸಮಯಕ್ಕೇ ಬಿಚ್ಚಿಕೊಳ್ಳುತ್ತದೆ. ಅದಕ್ಕೆಂದೇ ಕೆಲವು ವಿಧಾನಗಳಿವೆ. ದಾರದ ಹಾಗೂ ಅದಕ್ಕೆ ಬಳಸುವ ಮಣಿಗಳ ಗುಣಮಟ್ಟ ಚೆನ್ನಾಗಿರಬೇಕು. ಇಲ್ಲದಿದ್ದರೆ ಬಣ್ಣ ಮಾಸುತ್ತದೆ. ಕುಚ್ಚು ನೀಟಾಗಿ ನಿಲ್ಲುವುದಿಲ್ಲ, ಹರಡಿಕೊಳ್ಳುತ್ತದೆ.

ಈಗ ಸೀರೆಗೆ ಕುಚ್ಚು ಹಾಕುವುದು ಮಹಿಳೆಯರಿಗೆ ಒಂದು ಉದ್ಯೋಗ ಒದಗಿಸಿ ಕೊಟ್ಟಿದೆ, ಅಷ್ಟು ಎತ್ತರಕ್ಕೆ ಅದು ಫ್ಯಾಷನ್ ಟ್ರೆಂಡ್ ಬೆಳೆದಿದೆ. ಇದನ್ನು ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಮಾಡಬಹುದು. ಕಲಿಯುವುದು ಸುಲಭ ಕೂಡ. ಈ ರೀತಿಯ ಕುಚ್ಚು ಹಾಕುವುದನ್ನು ಕಲಿಯಲು ಅದಕ್ಕೆಂದೇ ಪ್ರತ್ಯೇಕವಾದ ನೂರಾರು ಯೂಟ್ಯೂಬ್ ಚಾನೆಲ್ ಗಳಿವೆ. ಸರಳವಾದ ಬೇಬಿ ಕುಚ್ಚಿನಿಂದ ಹಿಡಿದು ಬ್ರೈಡಲ್ ಕುಚ್ಚುವರೆಗೂ ವೀಡಿಯೋಗಳು ಇವೆ. ಆನ್ಲೈನ್ ತರಗತಿಗಳೂ ನಡೆಯುತ್ತವೆ. ಅಲ್ಲಿ ಸುಲಭವಾಗಿ ಕಲಿಯಬಹುದು.

ನೀವು ಸೀರೆಗೆ ಒಳ್ಳೆಯ ಕುಚ್ಚನ್ನು ಕಟ್ಟಿಸಿದರೆ ಸಾಲದು. ಆಮೇಲೆ ಅದರ ನಿರ್ವಹಣೆಯೂ ಮುಖ್ಯ. ಕುಚ್ಚಿನ ತುದಿ ಹಕ್ಕಿಯ ಪುಕ್ಕದ ಹಾಗೆ ಹರಡದಂತೆ ನೋಡಿಕೊಳ್ಳಬೇಕಾದರೆ ಕುಚ್ಚಿನ ಮೇಲೆ ಮಡಿಕೆ ಬರದಂತೆ ಸೀರೆಯನ್ನು ಮಡಚಬೇಕು. ಆಗ ಕುಚ್ಚು ಹರಡಿಕೊಳ್ಳುವುದಿಲ್ಲ. ಚೆಂದವಾಗಿ ನಿಲ್ಲುತ್ತದೆ. ಮಣಿಗಳಿಗೆ ನೀರು ತಾಕಿಸಬಾರದು. ಸೀರೆ ಉಟ್ಟಾಗ ಆ ಕುಚ್ಚುಗಳು ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳಬೇಕು. ■